ಬಿಟ್ಟಕಣ್ಣು ಬಿಟ್ಟಂಗೆ ನೊಡ್ತಿದ್ದ ಹನುಮಪ್ಪ ರವಷ್ಟತ್ತು ನೋಡಿ ಸಾಕಾಗಿ ಕಚೇರಿ ಬಾಗಿಲಿಗೆ ಬಂದು ಕಸ ಹೊಡಿತಿದ್ದ ವ್ಯಕ್ತಿನ 'ಅಣ್ಣಾ.... ಇಲ್ಲಿ ಬಸವರಾಜಪ್ಪ ಅನ್ನೋರು ಇದಾರಂತಲ್ಲ ಅವರೆಲ್ಲಿದಾರೆ' ಎಂದು ಕೇಳಿದ್ದಕ್ಕೆ ಆತ, 'ಇನ್ನು ಅವರು ಬಂದಿಲ್ಲಪ್ಪ ಬರ್ತಾರೆ ಅಲ್ಲೆ ಕೂತ್ಕಂಡಿರಿ' ಎಂದ ಈತ ಕೇಳಿಸ್ಕಂಡು ಕೂತ್ಕಂಡಿದ್ದ ಜಾಗಕ್ಕೆ ಮತ್ತೆ ಬಂದು ಕೂತ್ಕಂಡ.

ಮಧ್ಯಾಹ್ನ ಸುಮಾರು ಎರಡು ಗಂಟೆ ಆಗಿರಬಹುದು. ಕಚೇರಿಯ ಮುಂದಿದ್ದ ಮತ್ತು ಒಳಗಿದ್ದ ಜನರೆಲ್ಲ ಒಬ್ಬೊಬರೆ ಊಟಕ್ಕೆ ಹೋಗ್ತಾಯಿದ್ದರು, ಆಗ ಎತ್ತರದ ಆಳೊಬ್ಬರು ಬರ ಬರಾಂತ ಬಂದು ಕಚೇರಿ ಒಳಕೋಗಿ ಸೀದ ಹನುಮಪ್ಪನ ಹತ್ರ ಬಂದು, 'ಏನಪ್ಪ ಕಲ್ಲಳ್ಳಿಯವರ ನೀವಾ?' ಅಂದಾಗ ಕಾದು ಕಾದು ಕೂತ ಹನುಮಪ್ಪನಿಗೆ ಉಸಿರು ಬಂದಂಗಾತು, ಎದ್ದು ಕೈ ಮುಗಿದು, 'ಹೂ ಸ್ವಾಮಿ ಹೊತಾರೆಯಿಂದ ಕಾಯ್ತುಯಿದಿನಿ ನಿಮ್ಮ ದಾರಿಯ' ಎಂದು ಹೇಳೋ ಈತನ ದನಿಯಲ್ಲಿ, ಕಣ್ಣಲ್ಲಿನ ವಿನಯತೆ ಬಸವರಾಜಪ್ಪನಿಗೆ ಮರುಕ ಹುಟ್ಸಿತ್ತು, ರಾತ್ರಿ ನಿಂಗೇಗೌಡ್ರು ಹೇಳಿದ್ದು ಈತನ ಮುಖಕ್ಕೆ ತಾಳೆಯಾಗುವಂತಿತ್ತು. ಕೂಡ್ಲೆ ಹನುಮಪ್ಪನ್ನ ಪಕ್ಕದ ಕ್ಯಾಂಟಿನ್ನಿಗೆ ಕರಕ್ಕಂಡೋಗಿ ಮೊದಲು ಊಟ ಕೊಡಿಸಿ ನಂತರ ಆತನ ಕೈ ಚೀಲದಲ್ಲಿರುವ ದಾಖಲೆಗಳನ್ನು ಇಸ್ಕಂಡು ನೋಡುತ್ತ, 'ನಿಮ್ಮ ತಂದೆ ಹೇಸರೇನು' ಎಂದ್ರು ಈತ 'ಕದುರಪ್ಪ ಸ್ವಾಮಿ' ಎಂದ, ಮತ್ತೆ 'ನಿಮ್ಮ ತಾತನ ಹೆಸರು', 'ಕಾಳಜ್ಜ ಸ್ವಾಮಿ' ಎಂದ ಈತನಿಗೆ, 'ನೋಡಪ್ಪ ನಿಮ್ಮಪ್ಪನ ಹೆಸರಿಗೆ ನಿಮ್ಮತಾತನ ಜಮೀನು ಆಗಿಲ್ಲ. ಈಗ ತಾತನ ಜಮೀನು ನಿನ್ನ ಹೆಸರಿಗೆ ನೇರವಾಗಿ ಪೌತಿ ಖಾತೆ ಆಗಬೇಕು ಈಗಿನ ಸಂದರ್ಭದಲ್ಲಿ ಈ ವ್ಯವಸ್ಥೆಯಲ್ಲಿ ನಿಮ್ಮಂಥವರಿಗೆ ಕಷ್ಟಕರ, ಎನ್ನುತ್ತಲೇ ದಾಖಲೆಗಳೆಲ್ಲ ಸರಿಯಿವೆ. ಒಂದು ವಂಶವೃಕ್ಷ ಮಾಡಿಸಿ , ಆಧಾರ್ ಕಾರ್ಡ್ ಹಾಕಿ, ಈ ಎಲ್ಲ ದಾಖಲೆಗಳನ್ನು ಅರ್ಜಿಯೊಂದಿಗೆ ವಿಲೇಜ್ ಅಕೌಂಟೆಂಟ್‌ಗೆ ಕೊಟ್ಟು ಒಂದು ರಿಪೋರ್ಟ್ ಹಾಕಿಸಿ, ರೆವಿನ್ಯೂ ಅಧಿಕಾರಿಯ ಹತ್ತಿರನೂ ಒಂದು ರಿಪೋರ್ಟ್ ಹಾಕಿಸಿಕೊಂಡು, ಶಿರಸ್ತೆದಾರಿಂದ ನಿನ್ನ ಹೆಸರಿಗೆ ಪಾಣಿ ಬರಂಗೆ ಮಾಡಿಸಿಕೊಳ್ಳಬೇಕು. ಹಾಗಾಗಿ ಇವ್ರನೆಲ್ಲ ನೋಡ್ಕಬೇಕಾಗುತ್ತೆ, ಎನ್ನುವಾಗ ಹನುಮಪ್ಪನ ಮುಖದಲ್ಲಿ ಬೆವರು ಕಿತ್ತುಕೊಳ್ಳುತಿತ್ತು. ಒಣಗಿದ ಗಂಟಲಿಂದ ಈತ 'ನಮ್ಮ ತಾತನ ಜಮೀನ ನಾನು ಮಾಡಿಸ್ಕೊಳಕೆ ಇದೆಲ್ಲ ಮಾಡ್ಬೇಕ ಸ್ವಾಮಿ' ಎಂದಾಗ 'ಈ ವ್ಯವಸ್ಥೆ ಸುಲಭವಾಗಿಲ್ಲ ಹನುಮಪ್ಪ, ಬಡವರ ಕಷ್ಟ ಕನಿಕರ ಕೇಳೋಕೆ ಯಾರಿದರೆ? ನೋಡಿಕೊಳ್ಳಲಿಲ್ಲ ಅಂದರೆ ನಿನ್ನ ಹೆಸರಿಗೆ ಮಾಡ್ಕೊಳ್ಳೊದು ಬಹಳ ಕಷ್ಟ, ನಾನು ನಿನ್ನ ಪರವಾದ ಪ್ರಯತ್ನ ಮಾಡ್ತೀನಿ ಚಿಂತಿ ಮಾಡಬ್ಯಾಡ' ಎಂದೇಳಿ ಆತನ ಹತ್ತಿರ ಇರುವ ದಾಖಲೆ ಪತ್ರಗಳನ್ನು ಒಂದು ಸೆಟ್ಟು ಜೆರಾಕ್ಸ್ ಹಾಕಿಸಿಕೊಂಡ ಬಸವರಾಜಪ್ಪ ಮುಂದಿನ ವಾರ ಊಟಗೀಟ ಮುಗಿಸ್ಕೊಂಡು ಇಲ್ಲಿಗೆ ಬಾ ಸಿಗುತ್ತೇನೆ ಎಂದು ಹನುಮಪ್ಪನಿಗೆ ಹೇಳಿದಾಗ ಈತ ಕೈಮುಗಿದು 'ಆಯ್ತು ಸ್ವಾಮಿ ಮುಂದಿನ ವಾರ ಬರ್ತಿನಿ' ಎಂದೇಳಿ ಹೊರಡೊ ಹೊತ್ತಿಗೆ ಸೂರ್ಯ ನಿಧಾನವಾಗಿ ಪಶ್ಚಿಮಕ್ಕೆ ವಾಲುತ್ತಿದ್ದನು.

ಹನುಮಪ್ಪ ಊರಿಗೆ ಬಂದು ಮನೆ ಸೇರಿ ಎರಡು ದಿನವಾದರೂ ಸರಿಯಾಗಿ ನಿದ್ದೆಯಿಲ್ಲದೆ, ಮನೆ -ಮಠ, ಹೆಂಡತಿ -ಮಕ್ಕಳು, ದನ-ಕರಗಳ ಮೇಲೆ ನಿಗವಿಲ್ಲದೆ ಕೂತಲ್ಲಿ ಕೂತು ನಿಂತಲ್ಲಿ ನಿಂತು ಬಸವರಾಜಪ್ಪ ಹೇಳಿದ ಮಾತುಗಳೇ ಈತನ ಮನಸಿನ ಒಳಗೆ ಮಜ್ಜಿಗೆ ಕಡದಂಗೆ ಕಡದು ಮನಸ್ಸು ಅಲ್ಲೋಲ ಕಲ್ಲೋಲವಾಗಿತ್ತು. ಮನೆಯ ಹತ್ತಿರ ಹೊಲದ ಹತ್ತಿರ ಪರಿಚಿತರು ಯಾರು ಕಂಡರು ನಿರ್ಲಿಪ್ತನಾಗಿ ಯಾವುದೋ ಲೋಕದಲ್ಲಿದ್ದವನಂತೆ ತಲೆತಗ್ಗಿಸಿಕೊಂಡು ಓಡಾಡುವುದನ್ನ ಕಂಡ ಪಕ್ಕದಮನೆ ಸಿದ್ದಣ್ಣ 'ಯಾಕ್ಲ ಹನ್ಮಎಲ್ಡ್‌ಮೂರು ದಿನದಿಂದ ಒಂಥರ ಇದ್ದಿಯ ಯಾಕೆ ಉಷಾರಿಲ್ಲವೇನಲಾ? ಎಂದಿದ್ದಕ್ಕೆ ಈತ 'ಹಂಗೇನುಯಿಲ್ಲ ಕಣ್ಣಾ ಮೊನ್ನೆ ತಾತನ ಹೊಲನ ನನ್ನ ಹೆಸರಿಗೆ ಮಾಡ್ಕಳಕೆ ಅಂತ ನವಿಲೂರಿಗೆ ಹೋಗಿದ್ದಾಗ ಅದೇನೇನೋ ಡಾಕಿಮೆಂಟ್ಗಳು ಬೇಕು ಅಂತ ಕೇಳೌರೆ. ಅದೇ ತಲೆಯೊಳಗೆ ಬೋರ್ಗೆಹುಳ ಕೊರದಂಗೆ ಕೊರಿತೈತೆ' ಅಂದಾಗ ಸಿದ್ದಣ್ಣ 'ಇಷ್ಟೇನಾ ಅದೇನು ದೊಡ್ಡ ವಿಷಯಾಂತ ತಲೆಕೆಡಿಸ್ಕಂಡಿದಿಯ. ಅಲ್ವಲಾ ನಮ್ಮ ಹಟ್ಟಾಗೆ ಯಾರಲ ತಾತರ ಜಮೀನ ಅವರೆಸ್ರಿಗೆ ಮಾಡಿಸ್ಕಂಡೌರೆ? ಹಂಗೆ ಗೆಯ್ಕಂಡ್ರೇನು ಯಾರನ ಕಿತ್ಕಳಾಕೆ ಬರ್ತೈತೇನಲಾ? ಹೋಗಲೇ ಹುಚ್ಚಪ್ಪ ಸುಮ್ನಿರ್ಲಾದವನು ಗೊದ್ದ ಬಿಟ್ಕಂಡಂಗೆ' ಅಂಬ್ತ ಬೈದು ಎದ್ದು ಅದೇ ಹೋದ. ಇತ್ತ ಹನುಮಪ್ಪನು ಮುಖನ ಇಳೆ ಬಿಟ್ಕಂಡು ತಲೆಯ ಬಗ್ಗುಸ್ಕಂಡು ಯೋಚನ